ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ ದಯಮಾಡಿ ಸಭಾ ನಾಯಕರನ್ನು ತಮ್ಮ ಕೊಠಡಿಗೆ ಕರೆದು ಚರ್ಚೆ ಮಾಡಿ. ರೈತರನ್ನು ತ್ರಿಶಂಕು ಸ್ವರ್ಗದಲ್ಲಿಡುವುದು ಬೇಡ. ಒಂದು ತೀರ್ಮಾನ ತೆಗೆದುಕೊಂಡು ಪರಿಹಾರ ಕೊಡಬೇಕು. ಹೊಸ ಬೆಳೆ ಸಾಲ ರೈತರಿಗೆ ಸಿಗಬೇಕು ಎಂದು ವಿನಂತಿ ಸ್ವಾಮಿ.

ಅಧ್ಯಕ್ಷರು : ಈಗ ಸಭಾ ನಾಯಕರನ್ನು, ನಿಮ್ಮನ್ನು ಮತ್ತು ವಿರೋಧಪಕ್ಷದ ನಾಯಕರನ್ನು ಎಲ್ಲರನ್ನೂ ನನ್ನ ಛೇಂಬರ್‌ಗೆ ಕರೆದು ಮಾತನಾಡಿ ಅದರಿಂದ ಬರತಕ್ಕ ಫಲಶ್ರುತಿ ಏನು ಎಂಬುದನ್ನು ನಾನು ಆಗಲೇ ಕಲ್ಪಿಸಿಕೊಂಡಿದ್ದೇನೆ. ಏನಾಗುತ್ತದೆ? ಅವರು ಈಗಾಗಲೇ ಹೇಳಿದ್ದಾರೆ. ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರು. ಇದು ಕೇವಲ ಒಂದು ರಾಜ್ಯ ಸರ್ಕಾರ ಮಾಡತಕ್ಕದ್ದಲ್ಲ, ಎಲ್ಲ ರಾಜ್ಯ ಸರ್ಕಾರಗಳೂ ಒಟ್ಟಾಗಿ ಸೇರಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕು ಎಂದು ಹೇಳಿದರು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸೂಚನೆ ಕೊಟ್ಟಿದ್ದಾರೆ. ರಸಗೊಬ್ಬರದ ವಿಚಾರದಲ್ಲಿ ಒಂದು ನಿಯೋಗ ಕೇಂದ್ರ ಮಂತ್ರಿಮಂಡಲದ ಪ್ರಧಾನ ಮಂತ್ರಿಯವರನ್ನು ನೋಡುವುದಕ್ಕೆ ಹೋಗುತ್ತಿದ್ದೇವೆ. ಅದರ ಜೊತೆಗೆ ನಿಯೋಗ ಈ ವಿಚಾರವನ್ನು ಕೂಡ ಕೈಗೆತ್ತಿಕೊಂಡು ಸಂಬಂಧಪಟ್ಟವರ ಜೊತೆಯಲ್ಲಿ ಮಾತುಕತೆ ನಡೆಸಿ ರೈತರಿಗೆ ಇದರಿಂದ ಆಗಬಹುದಾದ ಅನುಕೂಲ ಕಲ್ಪಿಸಿಕೊಡತಕ್ಕ ಭೂಮಿಕೆ ಈಗಾಗಲೇ ಸಿದ್ಧವಾಗಿದೆ ಎಂದು ಹೇಳಿದ್ದಾರೆ. ಇನ್ನು ಎರಡು ದಿವಸದಲ್ಲಿ ಏನಾಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಕೇಂದ್ರ ಸರ್ಕಾರ..

ಅಧ್ಯಕ್ಷರು : ಇದಕ್ಕಿಂತ ಇನ್ನೇನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೇವಲ ರೈತರ ಪರವಾಗಿ ಆಶ್ವಾಸನೆ ಕೊಟ್ಟು ಈಡೇರಿಸಲಿಲ್ಲ ಎಂದು ನನ್ನ ಸಮಾಧಾನಕ್ಕೋಸ್ಕರ, ನಾವು ಕೊಟ್ಟ ಆಶ್ವಾಸನೆ ಈಡೇರಿಸದೆ ಸರ್ಕಾರ ಜನತೆಗೆ ದ್ರೋಹ ಮಾಡುತ್ತಿದೆ ಎಂಬುದನ್ನು ಜನತೆಗೆ ತಿಳಿಸುವುದಕ್ಕೋಸ್ಕರ, ಪ್ರಾಯಶ್ಚಿತ್ತಕ್ಕೋಸ್ಕರ ಇವತ್ತು ಸಾಯಂಕಾಲದವರೆಗೆ ಧರಣಿ ಕುಳಿತುಕೊಳ್ಳುತ್ತಿದ್ದೇವೆ.

ಅಧ್ಯಕ್ಷರು : ಈಗ ಮಾನ್ಯ ವಿರೋಧಪಕ್ಷದ ನಾಯಕರು ಭಾಷಣ ಮಾಡದಿದ್ದರೆ ನಾನು ಬೇರೆಯವರನ್ನು ಕರೆಯಬೇಕಾಗುತ್ತದೆ.

(ಶ್ರೀ ಬಿ.ಎಸ್. ಯಡಿಯೂರಪ್ಪನವರು ಧರಣಿಗೆ ಬಂದರು)

ಶ್ರೀ ಡಿ.ಬಿ. ಚಂದ್ರೇಗೌಡ : ವಾತಾವರಣ ಇಲ್ಲವಲ್ಲ.

ಅದ್ಯಕ್ಷರು : ವಾತಾವರಣ ಇದೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಒಂದು ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಅವರ ಮನವಿ ಕೇಳೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ನೋಡಿ ಹೀಗಾದರೆ ಹೇಗೆ?

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸಭೆಯ ಅಧ್ಯಕ್ಷರಾಗಿ ತಾವೂ ಕೂಡ ವಿನಂತಿ ಮಾಡಿದ್ದೀರಿ. ತಾವು ವಿನಂತಿ ಮಾಡಿದ್ದರೂ ಕೂಡ ಅವರು ಸಾಯಂಕಾಲದವರೆಗೆ ಧರಣಿ ಮಾಡುತ್ತೇವೆ ಎಂದರೆ ಇದು ಸದನಕ್ಕೆ ಶೋಭೆ ತರುವುದಿಲ್ಲ. ತಾವೂ ಕೂಡ ವಿನಂತಿ ಮಾಡಿದ್ದೀರಿ. ಸರ್ಕಾರದ ಪರವಾಗಿ ನಾವು